## 18. ಸಾಹಿಂಪ್ರಾ ಶಾಲೆ, ಅರೇಹಳ್ಳಿ

ನಮ್ಮ ಶಾಲೆಯು ಸಹ್ಯಾದ್ರಿಯ ತಪ್ಪಲಿನ ಸಿರಿಯಲ್ಲಿ, ಮಾಲತಿ ನದಿಯ ತಟದಲ್ಲಿ, ಪ್ರಶಾಂತವಾದ ಪರಿಸರದಲ್ಲಿ 1953ರಲ್ಲಿ ನೆಲೆಗೊಂಡಿರುತ್ತದೆ. ಈ ಶಾಲೆಗೆ ಸಮೀಪದಲ್ಲಿರುವ ಐತಿಹಾಸಿಕ ಕುಂದಾದ್ರಿ ಬೆಟ್ಟವು ನೋಡುಗರನ್ನು ತನ್ನತ್ತ ಕೈ ಬೀಸಿ ಕರೆಯುತ್ತಿದ್ದು, ಜೈನರ ಪವಿತ್ರ ಯಾತ್ರಾಸ್ಥಳವಾಗಿದೆ. ಸಾವಿರಾರು ವರ್ಷಗಳ ಹಿಂದೆ ಮಾನವನ ಉಗಮದ ಅವಧಿಯಲ್ಲಿನ ಅನೇಕ ಶಿಲಾಸಮಾಧಿಗಳು ಈ ಊರಿನ ಸುತ್ತಮುತ್ತಲಿನಲ್ಲಿವೆ ಎಂದು ಇತಿಹಾಸಜ್ಞರ ಅಭಿಪ್ರಾಯವಾಗಿದೆ. ಈ ಹಿನ್ನಲೆಯಲ್ಲಿ ಅರೇಹಳ್ಳಿ ಎಂಬ ಹೆಸರು ಬಂದಿದೆ ಎಂಬ ಅಭಿಪ್ರಾಯವಿದೆ.

ಮೊದಲು ಶಾಲೆಯು ದೇವಸ್ಥಾನದ ಪಡಶಾಲೆಯಲ್ಲಿ ಆರಂಭವಾಗಿ ನಂತದರಲ್ಲಿ ಸ್ವಂತ ಕಟ್ಟಡವನ್ನು ಹೊಂದಿದೆ. ಮೊದಲು ಎರಡು ಕೊಠಡಿಗಳಿಂದ ಆರಂಭವಾದ ಶಾಲೆಯು ಪ್ರಸ್ತುತ ಏಳು ಕೊಠಡಿಗಳನ್ನು ಹೊಂದಿದೆ. ಕಪ್ಪುಹಲಗೆ ಯೋಜನೆಯಲ್ಲಿ ಪುನಃ ಎರಡು ಕೊಠಡಿಗಳನ್ನು ನಿರ್ಮಾಣ ಮಾಡಿರುತ್ತಾರೆ. ನಂತರದಲ್ಲಿ ಜಿಲ್ಲಾ ಪಂಚಾಯತ್‌ನಿಂದ ಒಂದು ಕೊಠಡಿ ನಿರ್ಮಿಸಲಾಗಿದೆ. ಸರ್ವ ಶಿಕ್ಷಣ ಅಭಿಯಾನದಿಂದ ಎರಡು ಕೊಠಡಿಗಳು ನಿರ್ಮಾಣಗೊಂಡಿದ್ದು, ಪ್ರಸ್ತುತ ಏಳು ಕೊಠಡಿಗಳನ್ನು ಹೊಂದಿದೆ.

ಶಾಲಾ ಆವರಣದಲ್ಲಿ ಅಂಗನವಾಡಿ ಕೂಡಾ ಇದ್ದು, ಶಾಲಾ ಕೊಠಡಿಯಲ್ಲಿಯೇ ನಡೆಸಲಾಗುತ್ತಿದೆ. ಪ್ರಸ್ತುತ ಶಾಲೆಯಲ್ಲಿ 45 ವಿದ್ಯಾರ್ಥಿಗಳು, 03 ಜನ ಖಾಯಂ ಸಹಶಿಕ್ಷಕರು ಹಾಗೂ ಒಬ್ಬರು ಅತಿಥಿ ಶಿಕ್ಷಕರಿದ್ದಾರೆ. ಎಲ್.ಕೆ.ಜಿ ತರಗತಿಗಳನ್ನು ಈ ಸಾಲಿನಿಂದ ಆರಂಭಿಸಿದ್ದು, ಐದು ಜನ ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಹಿರಿಯ ವಿದ್ಯಾರ್ಥಿ ಸಂಘದ ನೆರವಿನಿಂದ ಒಬ್ಬ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ.

### ಶಾಲಾ ಭೌತಿಕ ಸ್ಥಿತಿ:–

- **ಶಾಲಾ ಕಾಂಪೌಂಡ್:–** ನಮ್ಮ ಶಾಲೆಯು ಉತ್ತಮವಾದ ಶಾಲಾ ಕಾಂಪೌಂಡನ್ನು ಹೊಂದಿದೆ. ಕಾಂಪೌಂಡ್‌ನ ನಿರ್ಮಾಣವನ್ನು ಗ್ರಾಮ ಪಂಚಾಯತಿ ಅನುದಾನ ಮತ್ತು ಸರ್ವ ಶಿಕ್ಷಣ ಅಭಿಯಾನದ ಅನುದಾನವನ್ನು ಬಳಸಿ ನಿರ್ಮಿಸಲಾಗಿದೆ. ಕಾಂಪೌಂಡ್‌ನ ಮೇಲೆ **'ತಂಬಾಕು ಮುಕ್ತ ವಲಯ'** ಘೋಷಣೆ ಬರೆಯಲಾಗಿದೆ. ಈ ಸಾಲಿನಲ್ಲಿ ಕಾಂಪೌಂಡ್‌ನ ಮೇಲೆ ಪರಿಸರ ಮತ್ತು ಸ್ವಚ್ಛತೆ ಬಗೆಗಿನ ನುಡಿಮುತ್ತುಗಳನ್ನು ಬರೆಯಿಸುವ ಯೋಜನೆ ಹಾಕಿಕೊಂಡಿರುತ್ತೇವೆ.
- **ಶಾಲಾ ಆವರಣ :–** ಶಾಲಾ ಆವರಣವು ಸುಂದರವಾದ ಕೈತೋಟವನ್ನು ಒಳಗೊಂಡಿದೆ. ಕೈತೋಟದಲ್ಲಿ ಹೂವಿನಗಿಡಗಳು, ಬಾಳೆಗಿಡಗಳು ಮತ್ತು ಕೆಲವು ಔಷಧಿ ಸಸ್ಯಗಳನ್ನು ಬೆಳೆಸಲಾಗಿದೆ. ಕೈತೋಟದಲ್ಲಿ ಇನ್ನು ಕೆಲವು ಉಪಯುಕ್ತ ಗಿಡಗಳನ್ನು ನೆಡುವ ಯೋಜನೆಯಿದ್ದು, ಕಾರ್ಯವು ಪ್ರಗತಿಯಲ್ಲಿದೆ. ಕೆಲವು ಕುಂಡಗಳಲ್ಲಿ ಸುಂದರವಾದ ಹೂವಿನ ಗಿಡಗಳನ್ನು ಬೆಳೆಸಿರುತ್ತೇವೆ. ಈ ಕುಂಡಗಳನ್ನು ವಿದ್ಯಾರ್ಥಿಗಳು ಖರ್ಚು ಭರಿಸಿ ನೀಡಿರುತ್ತಾರೆ. ಎರಡು–ಮೂರು ವಿದ್ಯಾರ್ಥಿಗಳು ಒಟ್ಟು ಹಣ ಹಾಕಿ ಒಂದೊಂದು ಹೂ ಕುಂಡ ನೀಡಿರುತ್ತಾರೆ. ಇದರ ನಿರ್ವಹಣೆಯನ್ನು ಕೂಡ ಈ ವಿದ್ಯಾರ್ಥಿಗಳೇ ಮಾಡುತ್ತಾರೆ. ಬೇಸಿಗೆಯಲ್ಲಿ ನೀರಿನ ವ್ಯವಸ್ಥೆಗಾಗಿ ಸ್ಪಿಂಕ್ಲರ್ ವ್ಯವಸ್ಥೆ ಮಾಡಲಾಗಿದೆ. ಕೈತೋಟದಲ್ಲಿ ಸುಂದರವಾದ ಕಟ್ಟೆಗಳನ್ನು ಕಟ್ಟಿ ಆಕರ್ಷಕಗೊಳಿಸಲಾಗಿದೆ. ಇದಕ್ಕೆ ಸುಮಾರು 25,000 ರೂಗಳು ಖರ್ಚಾಗಿದ್ದು, ನಮ್ಮ ಹಳೆಯ ವಿದ್ಯಾರ್ಥಿಗಳು ಇದಕ್ಕೆ ಕೊಡುಗೆ ನೀಡಿರುತ್ತಾರೆ. ಶಾಲಾ ಆವರಣದಲ್ಲಿ ತೆಂಗಿನ ಮರಗಳನ್ನು ನೆಟ್ಟು ಆರೈಕೆ ಮಾಡಲಾಗುತ್ತಿದೆ.
- **ಶಾಲಾ ಕಟ್ಟಡ:–** ಉತ್ತಮವಾದ ಕಟ್ಟಡವನ್ನು ಶಾಲೆಯು ಹೊಂದಿದ್ದು, ಒಟ್ಟು ಏಳು ಕೊಠಡಿಗಳಿವೆ. 02 ಕೊಠಡಿಗಳು ಆರ್.ಸಿ.ಸಿ ಕೊಠಡಿಗಳಾಗಿದ್ದು, ಅವುಗಳಿಗೆ ಹೆಂಚಿನ ಹೊದಿಕೆ ಹೊದಿಸುವ ಅಗತ್ಯವಿದೆ. ಈ ಸಂಬಂಧ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗೆ ಮನವಿ ಸಲ್ಲಿಸಲಾಗಿದೆ. ಉಳಿದಂತೆ ಐದು

ಕೊಠಡಿಗಳಿವೆ. ಒಂದು ಕೊಠಡಿಯಲ್ಲಿ ಅಂಗನವಾಡಿ ನಡೆಯುತ್ತಿದೆ. ಉಳಿದ ಆರು ಕೊಠಡಿಗಳಲ್ಲಿ ಒಂದನ್ನು ಕಛೇರಿಯಾಗಿ ಮಾಡಿಕೊಳ್ಳಲಾಗಿದೆ. ಒಂದು ಕೊಠಡಿಯನ್ನು ಗ್ರಂಥಾಲಯ ಮತ್ತು ಸ್ಮಾರ್ಟ್ ಕ್ಲಾಸ್‌ಗಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಉಳಿದಂತೆ ಒಂದು ಕೊಠಡಿಯು ಎಲ್.ಕೆ.ಜಿ ಕೊಠಡಿಯಾಗಿ ಬಳಕೆಯಾಗುತ್ತಿದೆ. ಈ ಕೊಠಡಿಯ ಒಳಗೋಡೆಗಳನ್ನು ಪೂರ್ಣವಾಗಿ ಅಗತ್ಯ ಬರಹಗಳಿಂದ ಬರೆಯಿಸಲಾಗಿದೆ. ಉಳಿದ ಮೂರು ಕೊಠಡಿಗಳಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆ. ಕೊಠಡಿಯ ಗೋಡೆಗಳಿಗೆ ಚಾರ್ಟ್‌ಗಳನ್ನು ನೇತು ಹಾಕಿ ಕಲಿಕೆಗೆ ಬಳಸಿಕೊಳ್ಳಲಾಗುತ್ತಿದೆ. ಕೆಲವು ಚಾರ್ಟ್‌ಗಳು ಶಿಕ್ಷಕರು ತಯಾರಿಸಿದ್ದರೆ, ಕೆಲವನ್ನು ವಿದ್ಯಾರ್ಥಿಗಳಿಂದ ತಯಾರಿಸಿ, ಪ್ರದರ್ಶಿಸಲಾಗಿದೆ. ತರಗತಿ ಕೊಠಡಿಗಳು ಉತ್ತಮವಾದ ಗ್ರೀನ್‌ಬೋರ್ಡ್ ಮತ್ತು ಬ್ಲ್ಯಾಕ್ ಬೋರ್ಡ್‌ಗಳನ್ನು ಹೊಂದಿವೆ.

- ❖ **ಆಟೋಪಕರಣಗಳು:–** ಶಾಲೆಯಲ್ಲಿ ವಿದ್ಯಾರ್ಥಿಗಳ ಸಹ ಪಠ್ಯ ಕಲಿಕೆಗಾಗಿ ಅನೇಕ ಆಟೋಪಕರಣಗಳು ಲಭ್ಯತೆಯಿದೆ. ವಾಲಿಬಾಲ್, ಥ್ರೋಬಾಲ್‌ಗಳು, ಟೆನಿಕಾಯ್ಟ್ ರಿಂಗ್‌ಗಳು, ಲೇಝೀಮ್ಸ್, ಡಂಬಲ್ಸ್ ಲಭ್ಯವಿದೆ. ಹಾಗೆಯೇ ಚದುರಂಗದಾಟದ ದಾಳಗಳು, ಕೇರಂಬೋರ್ಡ್ ಕೂಡ ಶಾಲೆಯಲ್ಲಿ ಲಭ್ಯವಿದ್ದು, ವಿದ್ಯಾರ್ಥಿಗಳು ಬಳಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಶಾಲಾ ವಾತಾವರಣವನ್ನು ಇನ್ನಷ್ಟು ಆಕರ್ಷವಾಗಿಸಲು ಶಾಲಾ ಆವರಣದಲ್ಲಿ ಹಿರಿಯ ವಿದ್ಯಾರ್ಥಿಗಳ ನೆರವಿನಿಂದ ಜಾರುಬಂಡೆ, ಜೋಕಾಲಿ, ಸೀಸಾ ಸೌಲಭ್ಯ ಕಲ್ಪಿಸಲಾಗಿದೆ.
- ❖ **ಕಂಪ್ಯೂಟರ್ ವ್ಯವಸ್ಥೆ :–** ಶಾಲೆಯಲ್ಲಿ ತಾಲ್ಲೂಕು ಪಂಚಾಯಿತಿಯಿಂದ ನೀಡಿದ ಒಂದು ಕಂಪ್ಯೂಟರ್ ಲಭ್ಯವಿದೆ. ಇದು ಆಗಾಗ ರಿಪೇರಿಗೆ ಬರುತ್ತಿದ್ದು, ಶಾಲಾನುದಾನ ಬಳಸಿ, ಸುಸ್ಥಿತಿಯಲ್ಲಿಡಲಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಶಾಲೆಗೆ ಇನ್ನು ಕೆಲವು ಕಂಪ್ಯೂಟರ್‌ಗಳು ಅಗತ್ಯವಿದ್ದು, ದಾನಿಗಳ ಶೋಧನೆಯಲ್ಲಿ ತೊಡಗಿದ್ದೇವೆ.

❖ **ಅಕ್ಷರ ದಾಸೋಹ ವ್ಯವಸ್ಥೆ :–** ಶಾಲೆಯಲ್ಲಿ ಅಕ್ಷರ ದಾಸೋಹ ವ್ಯವಸ್ಥೆಯು 2002–03 ನೇ ಸಾಲಿನಿಂದಲೂ ಉತ್ತಮವಾಗಿ ಕಾರ್ಯ ನಿರ್ವಹಣೆಯಲ್ಲಿದೆ. ಒಂದು ಅಡುಗೆ ಕೋಣೆ ಮತ್ತು ಒಂದು ಉಗ್ರಾಣ ಕೊಠಡಿ ಲಭ್ಯವಿದೆ. ಅಕ್ಷರ ದಾಸೋಹದ ಅಡುಗೆ ಕೋಣೆಯ ಮಳೆಗಾಲದಲ್ಲಿ ಸೋರುತ್ತಿದ್ದು, ಇದಕ್ಕಾಗಿ ಗ್ರಾಮ ಪಂಚಾಯಿತಿಯಿಂದ ನೆರವನ್ನು ಕೋರಿದ್ದು, ರಿಪೇರಿ ಮಾಡಿಸುವ ಕೆಲಸ ಪ್ರಗತಿಯಲ್ಲಿದೆ. ಅಡುಗೆಗೆ ಅಗತ್ಯ ಪಾತ್ರೆಗಳು ಲಭ್ಯವಿದ್ದು, ಉತ್ತಮವಾಗಿ ಜೋಡಿಸಲಾಗಿದೆ. ಮಕ್ಕಳಿಗೆ ಅಗತ್ಯವಿರುವಷ್ಟು ತಟ್ಟೆ–ಲೋಟಗಳನ್ನು ದಾನಿಗಳಿಂದ ಪಡೆಯಲಾಗಿದೆ. ಅಡುಗೆ ದಾಸ್ತಾನು ಕೊಠಡಿಯಲ್ಲಿ ಒಂದು ಫಿಲ್ಟರ್‌ನ್ನು ಜೋಡಿಸಲಾಗಿದ್ದು, ಅಡುಗೆಗೆ ಕುಡಿಯಲು ಶುದ್ದವಾದ ನೀರಿನ ವ್ಯವಸ್ಥೆ ಮಾಡಲಾಗಿದೆ. ಕೆಲವು ತರಕಾರಿಗಳನ್ನು ಶಾಲಾವರಣದಲ್ಲಿಯೇ ಬೆಳೆದು ಬಳಸಲಾಗುತ್ತಿದೆ. ಅಡುಗೆಗೆ ಶಾಲಾವರಣದ ಒಂದು ತೆಂಗಿನ ಮರದ ಕಾಯಿಗಳು ಕೂಡ ಬಳಕೆಯಾಗುತ್ತಿದೆ. ಆಗಾಗ ಸ್ಥಳೀಯರು ಕೂಡ ಕೆಲವು ಸೊಪ್ಪು ತರಕಾರಿಗಳನ್ನು ನೀಡುತ್ತಾರೆ. ಸುರಕ್ಷತೆಯ ದೃಷ್ಟಿಯಿಂದ ಅಗ್ನಿನಂದಕವನ್ನು ಅಡುಗೆ ಮನೆಯಲ್ಲಿಯೇ ಇರಿಸಲಾಗಿದೆ. ಅಡುಗೆಯವರು ಕೂಡ ಇದರ ಬಳಕೆಯನ್ನು ತಿಳಿದಿರುತ್ತಾರೆ.

- ❖ **ಪಾಠೋಪಕರಣಗಳ ವ್ಯವಸ್ಥೆ:–** ಪಾಠೋಪಕರಣಗಳನ್ನು ತರಗತಿಯಲ್ಲಿ ಬಳಸಿಕೊಳ್ಳುತ್ತಿದ್ದು, 7ನೇ ತರಗತಿ ಕೊಠಡಿಯಲ್ಲಿ ಜೋಡಿಸಲಾಗಿದೆ. ಇನ್ನು ಚಾರ್ಟ್‌ಗಳನ್ನು ಆಯಾ ತರಗತಿಯಲ್ಲಿ ತೂಗು ಹಾಕಲಾಗಿದೆ. ವಿಜ್ಞಾನ ಉಪಕರಣಗಳನ್ನು ಕೂಡ ಪೆಟ್ಟಿಗೆಯಿಂದ ಹೊರತೆಗೆದು ಕಪಾಟಿನಲ್ಲಿ ಜೋಡಿಸಲಾಗಿದೆ. ಅಗತ್ಯ ಪಾಠಗಳಿಗಾಗಿ ಇವುಗಳನ್ನು ಪ್ರಯೋಗಕ್ಕೆ ಬಳಸಿಕೊಳ್ಳುತ್ತೇವೆ. ಶಾಲಾನುದಾನ ಬಳಸಿ, ಕೆಲವು ರಾಸಾಯನಿಕಗಳನ್ನು ಕೂಡ ತಂದು ಬಳಸುತ್ತಿದ್ದೇವೆ.
- ❖ **ಪೀಠೋಪಕರಣಗಳು:–** ಪೀಠೋಪಕರಣಗಳು ಎಲ್ಲಾ ವಿದ್ಯಾರ್ಥಿಗಳಿಗೆ ಸಾಕಾಗುವಷ್ಟು ಲಭ್ಯ ಇವೆ. ಆದರೆ ಕೆಲವು ಡೆಸ್ಕ್‌ಗಳು ಹಾಳಾಗಿದ್ದು, ನಾಲ್ಕೈದು ಡೆಸ್ಕ್‌ಗಳ ಅವಶ್ಯಕತೆಯಿರುತ್ತದೆ. ನಲಿ–ಕಲಿ ಮತ್ತು ಎಲ್.ಕೆ.ಜಿ ತರಗತಿ ವಿದ್ಯಾರ್ಥಿಗಳಿಗೆ ವೈಯಕ್ತಿಕ ಕುರ್ಚಿ ಮತ್ತು ಟೇಬಲ್‌ನ ವ್ಯವಸ್ಥೆಯನ್ನು ಹಿರಿಯ ವಿದ್ಯಾರ್ಥಿಗಳಿಗೆ

ನೆರವಿನಿಂದ ಕೈಗೊಳ್ಳಲಾಗಿದೆ. ಶಿಕ್ಷಕರಿಗಾಗಿ ಕುರ್ಚಿಗಳ ಲಭ್ಯತೆಯಿದ್ದು, ಮೂರು ಟೇಬಲ್‌ಗಳ ಅವಶ್ಯಕತೆಯಿದೆ.

- **ಪ್ರಯೋಗಾಲಯಗಳು:–** ಪ್ರತ್ಯೇಕವಾದ ಪ್ರಯೋಗಾಲಯದ ವ್ಯವಸ್ಥೆ ಇರುವುದಿಲ್ಲ. ಆದರೆ ಕಛೇರಿಯ ಒಂದು ಕಪಾಟಿನಲ್ಲಿ ವಿಜ್ಞಾನ ಉಪಕರಣಗಳನ್ನು ಜೋಡಿಸಿ ಇಡಲಾಗಿದ್ದು, ಅಗತ್ಯ ಸಂದರ್ಭಗಳಲ್ಲಿ ಬಳಸುತ್ತೇವೆ.
- **ಗ್ರಂಥಾಲಯ:** ಶಾಲಾ ಗ್ರಂಥಾಲಯ ದಾಸ್ತಾನಿನಲ್ಲಿ ಸುಮಾರು 2441 ಪುಸ್ತಕಗಳಿವೆ. ಅವುಗಳನ್ನು ಪ್ರತ್ಯೇಕವಾಗಿ ಒಂದು ಕೊಠಡಿಯ ರ್‍ಯಾಕ್‌ನಲ್ಲಿ ಜೋಡಿಸಿಡಲಾಗಿದೆ. ಇಲ್ಲಿ ಕುರ್ಚಿ ಮತ್ತು ಟೇಬಲ್‌ಗಳನ್ನು ಜೋಡಿಸಿದ್ದು, ವಿದ್ಯಾರ್ಥಿಗಳು ಓದಲು ಅವಕಾಶ ಕಲ್ಪಿಸಲಾಗಿದೆ. ಪುಸ್ತಕಗಳನ್ನು ವಿಷಯವಾರು ಜೋಡಿಸಿ ಇಡಲಾಗಿದ್ದು, ಸುಲಭವಾಗಿ ಪುಸ್ತಕ ಆರಿಸಿಕೊಳ್ಳಲಾಗಿದೆ.
- **ಸ್ಮಾರ್ಟ್ ಕ್ಲಾಸ್:–** ಶಾಲೆಯಲ್ಲಿ ಹಳೆಯ ನಾಟಾ ಹರಾಜಿನ ಹಣದಿಂದ ಪ್ರೊಜೆಕ್ಟರ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಗ್ರಂಥಾಲಯ ಮತ್ತು ಸ್ಮಾರ್ಟ್ ಕ್ಲಾಸ್ ಎರಡೂ ಸೇರಿ ಒಂದು ಕೊಠಡಿಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಯಾವ ತರಗತಿಗೆ ಅಗತ್ಯವಿದೆಯೋ ಆ ತರಗತಿಯನ್ನು ಈ ಕೊಠಡಿಗೆ ಕರೆತಂದು ಪ್ರೊಜೆಕ್ಟರ್ ಮೂಲಕ ಪಾಠ ಮಾಡಲಾಗುತ್ತದೆ.
- **ಕಸ ವಿಲೇವಾರಿ:–** ಶಾಲೆಯಲ್ಲಿ ಕಸ ವಿಲೇವಾರಿಗಾಗಿ ತೊಟ್ಟಿಗಳನ್ನು ನಿರ್ಮಿಸಲಾಗಿದೆ. ಎರಡು ತೊಟ್ಟಿಗಳನ್ನು ನಿರ್ಮಿಸಲಾಗಿದ್ದು, ಒಂದರಲ್ಲಿ ಶತ್ರು ಕಸ ಇನ್ನೊಂದರಲ್ಲಿ ಮಿತ್ರ ಕಸ ಹಾಕಲಾಗುತ್ತದೆ. ಶತ್ರು ಕಸವನ್ನು ಸುಟ್ಟು ಹಾಕಲಾಗುವುದು. ಮಿತ್ರಕಸವನ್ನು ಗೊಬ್ಬರವಾಗಿ ಗಿಡಗಳಿಗೆ ಬಳಸಲಾಗುವುದು.
- **ಸಾವಯವ ಗೊಬ್ಬರ ಗುಂಡಿ:–** ಶಾಲಾವರಣದಲ್ಲಿ ಒಂದು ಗುಂಡಿಯನ್ನು ತೆಗೆದಿದ್ದು, ಅದಕ್ಕೆ ಸಗಣಿಯನ್ನು ಸಂಗ್ರಹಿಸಿ ಹಾಕಲಾಗುವುದು. ತರಕಾರಿ ಸಿಪ್ಪೆ, ಮಣ್ಣು ಸೇರಿಸಿ ಕೆಲವು ದಿನಗಳ ಕಾಲ ಮುಚ್ಚಿಡಲಾಗುವುದು. ಇದರಿಂದ ತಯಾರಾದ ಗೊಬ್ಬರವನ್ನು ಕೈತೋಟದ ಗಿಡಗಳಿಗೆ ಬಳಸಲಾಗುವುದು.
- **ಶೌಚಾಲಯಗಳು:–** ಶಾಲೆಯಲ್ಲಿ ಶೌಚಾಲಯದ ವ್ಯವಸ್ಥೆಯು ಉತ್ತಮವಾಗಿದೆ. ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯಿದೆ. ನೆಲಕ್ಕೆ ಟೈಲ್ಸ್ ಹಾಕಿಸುವ ಮೂಲಕ ಸ್ವಚ್ಛಗೊಳಿಸಲು ಸುಲಭ ಸಾಧ್ಯವಾಗಿದೆ. ವಿದ್ಯಾರ್ಥಿ ಮತ್ತು ಶಿಕ್ಷಕರು ಸೇರಿ ಸ್ವಚ್ಛತೆಯನ್ನು ನಿರ್ವಹಿಸಲಾಗುವುದು. ಶೌಚಾಲಯಕ್ಕೆ ನೀರಿನ ವ್ಯವಸ್ಥೆಯನ್ನು ಸಿಂಟೆಕ್ಸ್ ಮೂಲಕ ಮಾಡಲಾಗಿದೆ.
- **ಫ್ಯಾನ್:–** ಈಗ ಎರಡು ವರ್ಷಗಳಿಂದ 7ನೇ ತರಗತಿ ಪಾಸಾಗಿ ಹೋಗುವ ವಿದ್ಯಾರ್ಥಿಗಳು ಫ್ಯಾನ್‌ನ್ನು ದೇಣಿಗೆಯಾಗಿ ನೀಡುತ್ತಿದ್ದಾರೆ. ಇದರಿಂದ ಎರಡು ಫ್ಯಾನ್‌ಗಳು ಲಭ್ಯವಿದ್ದು, ಕಾರ್ಯನಿರ್ವಹಿಸುತ್ತಿದೆ.
- **ಜ್ಞಾನ ಕುಟೀರ:–** ಶಾಲಾವರಣದಲ್ಲಿ ಸ್ಥಳೀಯರ, ಪೋಷಕರ ನೆರವಿನಿಂದ ಸ್ಥಳೀಯವಾಗಿ ದೊರೆಯುವ ಸೋಗೆ, ಅಡಿಕೆ ದಬ್ಬೆ ಬಳಸಿ ಒಂದು ಕುಟೀರ ನಿರ್ಮಿಸಲಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಪಾಠವನ್ನು ಮಾಡಲಾಗುತ್ತದೆ. ಹಾಗೆ ವಿದ್ಯಾರ್ಥಿಗಳು ಬಿಡುವಿನ ಅವಧಿಯಲ್ಲಿ ಇಲ್ಲಿ ಕುಳಿತು ಓದಿಕೊಳ್ಳುತ್ತಾರೆ. ಈ ಕುಟೀರದಲ್ಲಿ ಸಾಮಾನ್ಯ ಜ್ಞಾನ ಹೆಚ್ಚಿಸುವ ವಿಚಾರಗಳಿರುವ ಚಾರ್ಟ್, ಮಿಂಚುಪಟ್ಟಿಗಳನ್ನು ತೂಗು ಹಾಕಲಾಗಿದ್ದು, ವಿದ್ಯಾರ್ಥಿಗಳು ಅದನ್ನು ಓದಿ ಜ್ಞಾನ ಸಂಪಾದಿಸುವರು. ಇದರ ಮೌಲ್ಯಮಾಪನವನ್ನು ಶಿಕ್ಷಕರು ಕೈಗೊಳ್ಳುವರು.
- **ವಿದ್ಯುತ್ ವ್ಯವಸ್ಥೆ:–** ಶಾಲೆಯಲ್ಲಿ ವಿದ್ಯುತ್ ವ್ಯವಸ್ಥೆಯು ಲಭ್ಯವಿದ್ದು ಉತ್ತಮವಾಗಿದೆ. ಕಂಪ್ಯೂಟರ್, ಪ್ರೊಜೆಕ್ಟರ್ ಬಳಕೆಗೆ ಅನುಕೂಲವಾಗಿದೆ.

### ಶೈಕ್ಷಣಿಕ ಅಂಶಗಳು:–

- **ನಾವೀನ್ಯಯುತ ಬೋಧನೆ:–** ಬದಲಾಗುತ್ತಿರುವ ಪ್ರಪಂಚದೊಂದಿಗೆ ನಾವು ಕೂಡ ಬದಲಾಗಬೇಕಾದ ಅನಿವಾರ್ಯತೆ ಇದೆ. ಇದರಂತೆ ಆಧುನಿಕ ತಂತ್ರಜ್ಞಾನ ಬಳಕೆ ಮಾಡಬೇಕಾದ ಅಗತ್ಯವಿದೆ. ಇದರಂತೆ ನಮ್ಮ ಶಾಲೆಯಲ್ಲಿ ಸ್ಮಾರ್ಟ್‌ಕ್ಲಾಸ್ ಮೂಲಕ ವಿಜ್ಞಾನ, ಸಮಾಜವಿಜ್ಞಾನ, ಗಣಿತಕ್ಕೆ ಸಂಬಂಧಿಸಿದ

ತರಗತಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದಾಗಿದೆ. ಮಕ್ಕಳಿಗೆ ಕಲಿಕೆಯು ಆಸಕ್ತಿದಾಯಕವೂ , ಆನಂದದಾಯಕವೂ ಆಗಿರುವುದು.

ಇದರೊಂದಿಗೆ ನಮ್ಮ ಶಾಲೆಗೆ ಶಿಲ್ಪಾ ಫೌಂಡೇಶನ್ ಬೆಂಗಳೂರು ಇವರು ಒಂದು ಲ್ಯಾಪ್‌ಟಾಪ್ ಜೊತೆಗೆ ಅದರಲ್ಲಿ ಪಾಠಗಳನ್ನು ಅಳವಡಿಸಿ ನೀಡಿರುತ್ತಾರೆ. ಇದರಿಂದ ಕೋರ್ ವಿಷಯಗಳ ಕಲಿಕೆ ಪರಿಣಾಮಕಾರಿಯಾಗಿದೆ. ಸುಮಾರು 120 ಕ್ಕೂ ಹೆಚ್ಚು ಚಟುವಟಿಕೆಗಳನ್ನು ಒಳಗೊಂಡ ವಿಜ್ಞಾನ ಕಿಟ್ ಇದ್ದು, ತುಂಬಾ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿದೆ. ನಲಿ–ಕಲಿ ತರಗತಿಗಳನ್ನು ಕೂಡ ಚಟುವಟಿಕೆಯಿಂದ ನಡೆಸಲಾಗುತ್ತಿದೆ.

- ❖ **ಸಾಂಸ್ಕೃತಿಕ ಕಾರ್ಯಕ್ರಮಗಳು:–** ಪ್ರತಿ ಶುಕ್ರವಾರ ಶಾಲೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತೇವೆ. ಉತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಚಿಕ್ಕ–ಚಿಕ್ಕ ಬಹುಮಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಅಭಿನಯ ಗೀತೆಗಳು, ರಸಪ್ರಶ್ನೆ, ಆಶುಭಾಷಣ, ಪಿಕ್ ಆ್ಯಂಡ್ ಆ್ಯಕ್ಟ್, ಪ್ರಬಂಧ, ಚರ್ಚಾಸ್ಪರ್ಧೆ, ಒಗಟುಗಳು, ಗಾದೆಗಳು, ಭಕ್ತಿಗೀತೆ, ಭಾವಗೀತೆ, ದೇಶಭಕ್ತಿಗೀತೆ, ವಿಜ್ಞಾನದ ಮಾದರಿ ತಯಾರಿಕೆ, ಕರಕುಶಲ ವಸ್ತುಗಳ ತಯಾರಿಕೆ , ಕಿರುನಾಟಕ ಹೀಗೆ ಅನೇಕ ಕಾರ್ಯಕ್ರಮಗಳನ್ನು ನಡೆಸಿ, ಎಲ್ಲಾ ವಿದ್ಯಾರ್ಥಿಗಳಿಗೆ ಭಾಗವಹಿಸಲು ಅವಕಾಶ ನೀಡಲಾಗುತ್ತಿದೆ. ಕಾರ್ಯಕ್ರಮ ನಡೆಸಿದ ವಿವರಗಳನ್ನು ಒಂದು ಪುಸ್ತಕದಲ್ಲಿ ದಾಖಲಿಸಲಾಗುತ್ತಿದೆ.

ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ನಮ್ಮ ವಿದ್ಯಾರ್ಥಿಗಳು ಉತ್ತಮ ಸಾಧನೆಯನ್ನು ತೋರಿಸಿರುತ್ತಾರೆ. ಈ ಬಾರಿ ಪಡೆದ ಬಹುಮಾನಗಳ ವಿವರ ಈ ಕೆಳಕಂಡಂತಿದೆ. ಚಿತ್ರಕಲೆ, ಮಣ್ಣಿನ ಮಾದರಿ, ಹಿಂದಿ ಕಂಠಪಾಠ, ಭಕ್ತಿಗೀತೆ, ಜಾನಪದ ನೃತ್ಯಗಳಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ. ಲಘು ಸಂಗೀತ, ಕೋಲಾಟ, ರಸಪ್ರಶ್ನೆ, ದೇಶಭಕ್ತಿಗೀತೆ ಸ್ಪರ್ಧೆಗಳಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಈ ಹಿಂದೆ 2014–15, 2015–16 ನೇ ಸಾಲಿನಲ್ಲಿ ನಮ್ಮ ವಿದ್ಯಾರ್ಥಿಗಳು ರಸಪ್ರಶ್ನೆ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿರುತ್ತಾರೆ.

ಕ್ರೀಡೆಯಲ್ಲಿಯೂ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಸ್ಥಳೀಯರ ಸಹಕಾರದಿಂದ ಈ ಸಾಲಿನ ವಲಯ ಮಟ್ಟದ ಕ್ರೀಡಾಕೂಟವನ್ನು ಕೂಡ ನಡೆಸಲಾಗಿದೆ.

- ❖ **ನೋ ಬ್ಯಾಗ್ ಡೇ:–** ನೋ ಬ್ಯಾಗ್ ಡೇ ಕಾರ್ಯಮವನ್ನು ಹೆಚ್ಚಾಗಿ ಆಯಾ ಅವಧಿಯ, ಆಯಾ ವಿಷಯದ ಬೋಧನೆಯ ಗಟ್ಟಿಗೊಳಿಸುವಿಕೆಗಾಗಿ ಬಳಸುತ್ತಿದ್ದೇವೆ. ಅದರಂತೆ ಚಟುವಟಿಕೆಗಳನ್ನು ನೀಡಲಾಗುತ್ತಿದೆ. ಉಕ್ತಲೇಖನ, ಪ್ರಬಂಧ, ಯೋಜನೆ ತಯಾರಿ, ಕಿರುಪರೀಕ್ಷೆಗಳು, ವಿಜ್ಞಾನ ಪ್ರಯೋಗ, ಸಿಸಿಇ ಮೌಲ್ಯಮಾಪನಗಳಿಗಾಗಿ ಬಳಸಿಕೊಳ್ಳುತ್ತಿದ್ದೇವೆ.
- ❖ **ಕಲಿಕೋಪಕರಣಗಳ ಬಳಕೆ:–** ಕಲಿಕೋಪಕರಣಗಳನ್ನು, ವಿಜ್ಞಾನದ ಉಪಕರಣಗಳನ್ನು ವ್ಯವಸ್ಥಿತವಾಗಿ ಜೋಡಿಸಿದ್ದು, ಅವಶ್ಯವಿದ್ದೆಡೆ ಬಳಕೆ ಮಾಡುತ್ತಿದ್ದೇವೆ. ಕಲಿಕೋಪಕರಣಗಳನ್ನು ತರಗತಿ ಕೋಣೆಯ ಕಪಾಟಿನಲ್ಲಿ ವ್ಯವಸ್ಥಿತವಾಗಿ ಜೋಡಿಸಲಾಗಿದೆ. ಇದರಿಂದ ಬಳಸಲು ಅನುಕೂಲವಾಗುತ್ತಿದೆ. ನಲಿ–ಕಲಿ ತರಗತಿಯಲ್ಲಿ ಕಲಿಕೋಪಕರಣಗಳನ್ನು ಉತ್ತಮವಾಗಿ ಜೋಡಿಸಿ ಇಡಲಾಗಿದೆ.
- ❖ **ಗ್ರಂಥಾಲಯದ ಬಳಕೆ:–** ಗ್ರಂಥಾಲಯದ ಪುಸ್ತಕಗಳನ್ನು ಗ್ರಂಥಾಲಯದಲ್ಲಿಯೂ ಕುಳಿತು ಓದಲು ಅವಕಾಶವಿದೆ. ಮನೆಗೆ ತೆಗೆದುಕೊಂಡು ಹೋಗಲು ನೀಡುತ್ತಿದ್ದೇವೆ. ಗ್ರಂಥಾಲಯದ ಮಂತ್ರಿ ಇದರ ನಿರ್ವಹಣೆ ಮಾಡುತ್ತಾರೆ. ವಿದ್ಯಾರ್ಥಿಗಳಿಗೆ ಪ್ರತಿ ವಾರ ಪುಸ್ತಕ ನೀಡಿ ವಿವರ ಬರೆದಿಡುತ್ತಾರೆ. ವಾಪಾಸ್ಸು ನೀಡುವಾಗ ಹಿಮ್ಮಾಹಿತಿಯೊಂದಿಗೆ ಪುಸ್ತಕ ಹಿಂಪಡೆಯಲಾಗುವುದು. ಸಂಜೆಯ ಪ್ರಾರ್ಥನಾ ಅವಧಿಯಲ್ಲಿ ವಿದ್ಯಾರ್ಥಿಗಳು ತಾವು ತೆಗೆದುಕೊಂಡ ಪುಸ್ತಕದ ಮುಖ್ಯಾಂಶಗಳನ್ನು ಸದರಿ ಪ್ರಕಾರ ದಿನಕ್ಕೆ ಒಬ್ಬರಂತೆ

ಒಪ್ಪಿಸುತ್ತಾರೆ. ತರಗತಿ ಕೊಠಡಿಗಳಲ್ಲಿಯೂ ಪುಸ್ತಕಗಳನ್ನು ಇಟ್ಟು ಓದುವ ಮೂಲೆ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುವರು. ಎರಡು ವಾರಕ್ಕೊಮ್ಮೆ ಪುಸ್ತಕಗಳನ್ನು ಬದಲಾಯಿಸಲಾಗುವುದು.

- ❖ **ಸಿಸಿಇ ಚಟುವಟಿಕೆಗಳು:–** ಶೈಕ್ಷಣಿಕ ವರ್ಷದ ರೂಪಣಾತ್ಮಕ ಮೌಲ್ಯಮಾಪನ ಆಯಾ ಘಟಕದ ಬೋಧನೆಯ ಅವಧಿಯಲ್ಲಿ ಅಥವಾ ಕೊನೆಯಲ್ಲಿ ನಡೆಸಲಾಗುವುದು. ಸಿಸಿಇ ಗಾಗಿ ಯೋಜನೆ, ಕಿರುಪರೀಕ್ಷೆ, ಚಟುವಟಿಕೆಗನ್ನು ನೀಡಲಾಗುವುದು. ಜೊತೆಗೆ ಪ್ರತಿ ಘಟಕಕ್ಕೆ ಕಿರುಪರೀಕ್ಷೆಯನ್ನು ಮಾಡಿ, ಪೂರಕ ಬೋಧನೆ ನಡೆಸಲಾಗುವುದು. ಕಲಿಕೆಯಲ್ಲಿ ನಿಧಾನಗತಿಯ ವಿದ್ಯಾರ್ಥಿಗಳಿಗೆ ವಿಶೇಷ ಗಮನ ನೀಡಲಾಗುವುದು.
- ❖ **ಸಂಘದ ಚಟುವಟಿಕೆಗಳು:–** ಶಾಲೆಯಲ್ಲಿ ಇಲಾಖಾ ನಿಯಮದಂತೆ ವಿವಿಧ ಸಂಘಗಳನ್ನು ರಚಿಸಲಾಗಿದೆ. ವಿದ್ಯಾರ್ಥಿ ಸಂಸತ್ತು, ವಿಜ್ಞಾನ ಸಂಘ, ಗಣಿತ ಸಂಘ, ನೈರ್ಮಲ್ಯ ಸಂಘ, ಸಾಂಸ್ಕೃತಿಕ ಸಂಘ, ಮಕ್ಕಳ ಹಕ್ಕುಗಳ ಸಂಘ. ಪ್ರತಿ ಸಂಘದಲ್ಲಿ ಐದರಿಂದ ಆರು ಜನ ಪದಾಧಿಕಾರಿಗಳಿದ್ದಾರೆ. ಅವರಿಗೆ ಮಾರ್ಗದರ್ಶನ ಶಿಕ್ಷಕರು ಇದ್ದಾರೆ. ಅದರಂತೆ, ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಂತೆ ಪ್ರತಿ ಶುಕ್ರವಾರ ಶಾರದಾ ಪೂಜೆಯ ಸಂದರ್ಭದಲ್ಲಿ ಒಂದೊಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವರು. ವಿವಿಧ ಸ್ಪರ್ಧೆಗಳು, ವಿಜ್ಞಾನ ಪ್ರಯೋಗ, ರಸಪ್ರಶ್ನೆ, ವಿನೋದ ಗಣಿತಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸುತ್ತೇವೆ. ವಿದ್ಯಾರ್ಥಿಗಳು ಇದರ ವರದಿಯನ್ನು ಬರೆದಿಡುವರು. ಮಕ್ಕಳಲ್ಲಿ ಹೆಚ್ಚಿನ ಜ್ಞಾನ ಹೊಂದಲು, ಸಭಾ ಕಂಪನ ಹೋಗಲಾಡಿಸಲು, ಆತ್ಮವಿಶ್ವಾಸ ಮೂಡಿಸಲು ಇದರಿಂದ ಸಾಧ್ಯವಾಗಿದೆ.

ನಮ್ಮ ಶಾಲೆಯಲ್ಲಿ ಶಾಲಾ ಸಂಸತ್ತು ರಚನೆಯನ್ನು ಚುನಾವಣೆಯ ಮೂಲಕವೇ ರಚಿಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ಸರ್ಕಾರ ರಚನೆಯ ಕಲ್ಪನೆ ಮೂಡಿಸಲು ಸಹಾಯಕವಾಗುತ್ತಿದೆ.

- ❖ **ಪರೀಕ್ಷೆಗಳು:–** ಇಲಾಖಾ ನಿರ್ದೇಶನದಂತೆ ಪರೀಕ್ಷೆಗಳನ್ನು ನಡೆಸುತ್ತಿದ್ದೇವೆ. ಪ್ರಥಮ ಸೆಮಿಸ್ಟರ್‌ನಲ್ಲಿ ಎರಡು ರೂಪಣಾತ್ಮಕ ಮೌಲ್ಯಮಾಪನ ಒಂದು ಸಂಕಲನಾತ್ಮಕ ಮೌಲ್ಯಮಾಪನ. ಇದರಂತೆ ದ್ವಿತೀಯ ಸೆಮಿಸ್ಟರ್‌ನಲ್ಲಿಯೂ ಮೌಲ್ಯಮಾಪನ ಕೈಗೊಳ್ಳುತ್ತೇವೆ. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಬೆಳಿಗ್ಗೆ 9–30 ರಿಂದ 10 ರವರೆಗೆ ಒಬ್ಬೊಬ್ಬ ಶಿಕ್ಷಕರು ಪೂರಕ ಬೋಧನೆ ಮಾಡುತ್ತಿದ್ದೇವೆ. ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪೋಷಕರ ಸಭೆ ನಡೆಸಿ ಪೋಷಕರೊಂದಿಗೆ ವಿದ್ಯಾರ್ಥಿಗಳ ಪ್ರಗತಿಯನ್ನು ಚರ್ಚಿಸುತ್ತೇವೆ ಅವರ ಸಹಕಾರವನ್ನು ಪಡೆಯುತ್ತೇವೆ.
- ❖ **ಸ್ಥಳೀಯರ ಸಹಕಾರ:–** ಶಾಲೆಯ ಅಭಿವೃದ್ಧಿಗೆ ನಮ್ಮ ಊರಿನವರ ಸಹಕಾರವು ತುಂಬಾ ಗಣನೀಯವಾದುದು. ಕಳೆದ ಸಾಲಿನಲ್ಲಿ ಹಿರಿಯ ವಿದ್ಯಾರ್ಥಿ ಸಂಘವನ್ನು ರಚನೆ ಮಾಡಿ, ಆ ಮೂಲಕ ಸುಮಾರು 03 ಲಕ್ಷ ದೇಣಿಗೆಯನ್ನು ಸಂಗ್ರಹಿಸಲಾಯಿತು. ಈ ಹಣವನ್ನು ಗ್ರೀನ್ ಬೋರ್ಡ್ ಖರೀದಿ, ಕೈತೋಟದ ನವೀಕರಣ, ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳಿಗೆ ಆಟದ ಪರಿಕರಗಳ ನಿರ್ಮಾಣ, ಎಲ್.ಕೆ.ಜಿ ಶಿಕ್ಷಕರ ಸಂಬಳ, ಎಲ್.ಕೆ.ಜಿ ಕೊಠಡಿಯ ಡ್ರಾಯಿಂಗ್, ಪೀಠೋಪಕರಣಗಳು ಇತ್ಯಾದಿಗಳಿಗಾಗಿ ಬಳಸಿಕೊಳ್ಳಲಾಗಿದೆ. ಈಗ ಸುಮಾರು ಆರು ವರ್ಷಗಳಿಂದ ಸ್ಥಳೀಯರ ಸಹಕಾರದಿಂದ 10,000 ರೂಗಳನ್ನು ಬ್ಯಾಂಕಿನಲ್ಲಿ ಎಫ್.ಡಿ ಇಟ್ಟು ಬಡ್ಡಿ ಹಣವನ್ನು ಏಳನೇ ತರಗತಿಯ ಇಬ್ಬರು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರವಾಗಿ ನೀಡಲಾಗುತ್ತಿದೆ. ಶಾಲೆಯ ಅಭಿವೃದ್ಧಿಗೆ ಎಸ್.ಡಿ.ಎಂ.ಸಿ, ಹಿರಿಯ ವಿದ್ಯಾರ್ಥಿ ಸಂಘ, ಪೋಷಕರು, ಗ್ರಾಮಸ್ಥರ ಕೊಡುಗೆ ಗಣನೀಯವಾಗಿದೆ.

ಇದುವರೆಗೆ ಶಾಲೆಗೆ ಅನೇಕ ವಸ್ತುಗಳನ್ನು ದಾನಿಗಳು ನೀಡಿರುತ್ತಾರೆ. ಕಳೆದ ಸಾಲಿನಲ್ಲಿ ಹಿರಿಯ ವಿದ್ಯಾರ್ಥಿಯೊಬ್ಬರು ನೋಟ್‌ಬುಕ್ ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಸ್ವೆಟರ್‌ನ್ನು ನೀಡಿರುತ್ತಾರೆ. ಇನ್ನೊಬ್ಬ ಹಿರಿಯ ವಿದ್ಯಾರ್ಥಿ ಟೂಥ್‌ಪೇಸ್ಟ್ ಕೊಡುಗೆ ನೀಡಿರುತ್ತಾರೆ. ಹಿಂದಿನ ವರ್ಷಗಳನ್ನು ಗಣನೆಗೆ ತೆಗೆದುಕೊಂಡರೆ ನೀರಿನ

ಮೋಟಾರ್, ಪೀಠೋಪಕರಣಗಳು (ನಲಿಕಲಿ), ಡಿ.ವಿ.ಡಿ ಪ್ಲೇಯರ್, ಗೇಟುಗಳು, ಧ್ವಜಸ್ತಂಭ, ಶಾಲಾ ಕಮಾನು ಹೀಗೆ ಹತ್ತು ಹಲವು ವಸ್ತುಗಳು ದೇಣಿಗೆಯಾಗಿ ಬಂದಿದೆ. ಶಾಲಾ ವಾರ್ಷಿಕೋತ್ಸವ, ಪ್ರತಿಭಾ ಕಾರಂಜಿ, ಕ್ರೀಡಾಕೂಟಗಳನ್ನು ಯಶಸ್ವಿಯಾಗಿ ನಡೆಸಲು ಗ್ರಾಮಸ್ಥರ ಭರಪೂರ ಸಹಕಾರವಿದೆ.

**ಶಾಲೆಯಲ್ಲಿ ನಡೆಸಿದ ಇತರೆ ಪೂರಕ ಶೈಕ್ಷಣಿಕ ಕಾರ್ಯಕ್ರಮಗಳು:-**

- ❖ ಪಠ್ಯ ವಿಷಯಗಳ ಜೊತೆಗೆ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗುವಂತೆ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಯೋಗದ ಮಹತ್ವ ತಿಳಿಸುವ ಸಲುವಾಗಿ ಯೋಗ ಶಿಬಿರವನ್ನು ನಡೆಸಲಾಯಿತು. ಯೋಗದ ಬಗ್ಗೆ ಹೆಚ್ಚು ತಿಳುವಳಿಕೆ ಇರುವವರನ್ನು ಕರೆಯಿಸಿ, ಒಂದು ಸಂಜೆ ಶಾಲಾ ಅವಧಿಯ ನಂತರ ಯೋಗ ಶಿಬಿರ ನಡೆಸಲಾಯಿತು. ಮಕ್ಕಳಿಗೆ ಯೋಗದ ಮಹತ್ವವನ್ನು ತಿಳಿಸಲಾಯಿತು. ವಿದ್ಯಾರ್ಥಿಗಳು, ಶಿಕ್ಷಕರು ಇದರಲ್ಲಿ ಉತ್ಸಾಹದಿಂದ ಪಾಲ್ಗೊಳ್ಳಲಾಯಿತು. ಇದನ್ನು ವಿದ್ಯಾರ್ಥಿಗಳು ಮನೆಯಲ್ಲಿ ಅಭ್ಯಾಸ ಮಾಡುತ್ತಿದ್ದಾರೆ.
- ❖ ಕಳೆದ ಸಾಲಿನಲ್ಲಿ ಏಪ್ರಿಲ್ ಮೊದಲ ವಾರದ ಕೊನೆಯಲ್ಲಿ ಎರಡು ದಿನ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರದ ಮಾದರಿಯಲ್ಲಿ ಸಂಸ್ಕೃತಿ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ಚಿತ್ರಕಲೆ, ಕರಕುಶಲ ಕಲೆ, ಸಂಗೀತ, ಮೌಲ್ಯ ಶಿಕ್ಷಣಗಳಿಗೆ ಆದ್ಯತೆ ನೀಡಿ, ಈ ಕ್ಷೇತ್ರಗಳಲ್ಲಿ ನಿಪುಣರಾದವರನ್ನು ಕರೆಯಿಸಿ, ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಯಿತು. ವಿದ್ಯಾರ್ಥಿಗಳು ಬಹಳ ಆಸಕ್ತಿಯಿಂದ ಇದರಲ್ಲಿ ಭಾಗವಹಿಸಿದರು.
- ❖ ವಿದ್ಯಾರ್ಥಿಗಳಿಗೆ ಚಾರ್ಟ್‌ಗಳನ್ನು ತಯಾರಿಸಲು ತಿಳಿಸಿ, ಮಾರ್ಗದರ್ಶನ ನೀಡಲಾಯಿತು. ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಚಾರ್ಟ್‌ಗಳನ್ನು ತಯಾರಿಸಿದರು. ಉತ್ತಮ ಪ್ರಯತ್ನಕ್ಕೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.
- ❖ ವಿದ್ಯಾರ್ಥಿಗಳಿಂದ ವಿಜ್ಞಾನದ ಮಾದರಿ ತಯಾರಿ ಮತ್ತು ಪ್ರಯೋಗಕ್ಕೆ ಅವಕಾಶ ನೀಡಲಾಯಿತು. ಪಠ್ಯ ವಿಷಯವನ್ನು ಆಧರಿಸಿದ ಅನೇಕ ಮಾದರಿ ಮತ್ತು ಪ್ರಯೋಗಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ಉತ್ತಮ ಪ್ರಯತ್ನಕ್ಕೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.
- ❖ ವಿದ್ಯಾರ್ಥಿಗಳಿಗೆ ನಮ್ಮ ಸಾಂಪ್ರದಾಯಿಕ ಉಡುಗೆಗಳ ಬಗ್ಗೆ ಪರಿಚಯ ಮತ್ತು ಗೌರವ ಇರಬೇಕೆನ್ನುವ ದೃಷ್ಟಿಯಿಂದ ಮಕ್ಕಳ ದಿನಾಚರಣೆ ದಿನ ಸಾಂಪ್ರದಾಯಿಕ ಉಡುಪು ಧರಿಸಲು ಅವಕಾಶ ನೀಡಲಾಯಿತು. ವಿದ್ಯಾರ್ಥಿಗಳು ಸೀರೆ, ಪಂಚೆಗಳನ್ನು ಧರಿಸಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪೋಷಕರು ಮನೆಯಿಂದ ವಿವಿಧ ಬಗೆಯ ತಿಂಡಿ- ಅಡುಗೆಗಳನ್ನು ಮಾಡಿ ಕಳುಹಿಸಿದ್ದರು. ಎಲ್ಲರೂ ಸಹ ಭೋಜನ ಮಾಡಲಾಯಿತು.
- ❖ ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳಿಗೆ ಅವಕಾಶ ನೀಡಿ ಬೆಳೆಯಲು ಪ್ರೋತ್ಸಾಹಿಸುತ್ತಿದ್ದೇವೆ. ಈ ಕಾರ್ಯದಲ್ಲಿ ನಮ್ಮ ಇಲಾಖೆ, ಎಸ್.ಡಿ.ಎಂ.ಸಿ, ಹಿರಿಯ ವಿದ್ಯಾರ್ಥಿ ಸಂಘ, ಎಲ್ಲಾ ಗ್ರಾಮಸ್ಥರ ಸಹಕಾರ, ಮಾರ್ಗದರ್ಶನವಿದೆ. ಇನ್ನೂ ಹೆಚ್ಚಿನ ಸಹಕಾರ ಮಾರ್ಗದರ್ಶನವನ್ನು ನಿಮ್ಮಿಂದ ಅಪೇಕ್ಷಿಸುತ್ತಾ **"ನಮ್ಮೂರ ಶಾಲೆ"**ಯನ್ನು ಕಟ್ಟಲು ಕಂಕಣಬದ್ಧರಾಗಿದ್ದೇವೆ.








